**NP – 001**

**ಮೊದಲನೆ ಸೆಮಿಸ್ಟರ್ ಬಿ.ಎ. ಪರೀಕ್ಷೆ, ಮೇ 2022**

**(NEP) (2021-22 and Onwards)**

**ಕನ್ನಡ ಭಾಷಾ ಪತ್ಯ (Paper – I)**

**ಕಲಾ ಕನ್ನಡ**

ಸಮಯ : 2½ ಗಂಟೆಗಳು — ಗರಿಷ್ಠಾಂಕಗಳು : 60

I. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (ಎಂಭತ್ತು ಪದಗಳನ್ನು ಮೀರದಂತೆ) **(5×4=20)**

1) ಒಂದನೇ ತರಗತಿಯಿಂದಲೇ ಇಂಗ್ಲೀಷನ್ನು ಒಂದು ಭಾಷೆಯಾಗಿ ಕಲಿಸುವುದರ ಸಾಧಕ ಬಾಧಕಗಳೇನು ?

2) ಕನ್ನಡದ ಉಳಿವಿಗೆ ಸ್ವತಂತ್ರ ಮತ್ತು ಮುಕ್ತ ತಂತ್ರಾಂಶಗಳ ಬಳಕೆ ಹೇಗೆ ಸಹಾಯಕ ?

3) 'ಪ್ರಕೃತಿ ಸಂಸ್ಕಾರದಾತೆಯಾದ ಗುರುವೂ ಹೌದು' ಈ ಮಾತನ್ನು 'ನಾವು ಮತ್ತು ಮರಗಳು' ಪದ್ಯದ ಹಿನ್ನಲೆಯಲ್ಲಿ ವಿಸ್ತರಿಸಿ.

4) ಚಂದ್ರಗಿರಿ ನದಿಯಲ್ಲಿ ಬಂದ ಪ್ರವಾಹದ ಪರಿಸ್ಥಿತಿಯನ್ನು ವಿವರಿಸಿ.

5) ಸಂವಿಧಾನದ ನಾಲ್ಕನೆಯ ಭಾಗದ ನೀತಿಗಳನ್ನು ಪಟ್ಟಿ ಮಾಡಿ.

6) ಜಾನ್ ರಸ್ಕಿನ್ ಬರೆದ 'Un To This Last' ಕೃತಿಯು ಗಾಂಧೀಜಿಯವರ ಮೇಲೆ ಹೇಗೆ ಪ್ರಭಾವ ಬೀರಿತು ?

II. ಎರಡು ಪ್ರಶ್ನೆಗಳಿಗೆ ಉತ್ತರಿಸಿ. (ನೂರ ಅರವತ್ತು ಪದಗಳು ಮೀರದಂತೆ) **(2×10=20)**

1) ನಾಡು–ನುಡಿಗಳ ಬಗೆಗಿನ ಅಪರಿಮಿತ ಪ್ರೇಮವನ್ನು 'ಕನ್ನಡ ಪದಗೊಳ್' ಪದ್ಯ ಹೇಗೆ ವ್ಯಕ್ತಪಡಿಸಿದೆ ?

2) 'ಪರಿಸರ ಒಂದು ಒತ್ತೆಯಾಳು' ಹೇಗೆ ? ತೇಜಸ್ವಿಯವರ ನಿಲುವುಗಳೊಂದಿಗೆ ಚರ್ಚಿಸಿ.

3) ಸಿದ್ಧಲಿಂಗಯ್ಯನವರ ಬಾಲ್ಯದ ಅನುಭವಗಳು 'ಏನೋರ ಹೊಲ'ದಲ್ಲಿ ಹೇಗೆ ನಿರೂಪಣೆಗೊಂಡಿದೆ ?

4) ಇತಿಹಾಸ ಅಧ್ಯಯನದ ಮುಂದುವರಿದ ಮಾದರಿಗಳನ್ನು ಡಾ. ಎಚ್. ಎಸ್. ಗೋಪಾಲರಾವ್ ಹೇಗೆ ಗುರುತಿಸುತ್ತಾರೆ ?

III. ಕೆಳಗಿನ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಸೂಕ್ತ ಶೀರ್ಷಿಕೆ ನೀಡಿ. **(3×1=3)**

ಬಿದಿರು ಹೂ ಬಿಟ್ಟಿತೆಂದರೆ ಜನ ಭೀತಿಗೊಳ್ಳುತ್ತಾರೆ. ಇದು ಕ್ಷಾಮದ ಮುನ್ಸೂಚನೆಯೆಂದು ಖತಿಗೊಳ್ಳುತ್ತಾರೆ. ಈ ಭಯಕ್ಕೆ ಕಾರಣವಿಲ್ಲದೆ ಇಲ್ಲ. ರಾಶಿರಾಶಿಯಾಗಿ ಬೀಜಗಳ ಮಳೆ ಸುರಿದಾಗ ಇಲಿ ಹೆಗ್ಗಣಗಳ ರಾಜ್ಯಭಾರ ತಾಂಡವವಾಡುತ್ತದೆ; ಬಿದಿರು ಅಕ್ಕಿಯನ್ನು ತಿಂದ ಈ ಪ್ರಾಣಿಗಳ ಸಂತಾನಾಭಿವೃದ್ಧಿ ಚಕ್ರ ರಭಸದಿಂದ ಓಡುತ್ತದೆ. ಮಿತಿಯಿಲ್ಲದ ಸಂತಾನ ಬೆಳೆದು ರೈತನ ಬೆಳೆಗೂ ಕಣಜಕ್ಕೂ ಮುತ್ತಿಗೆ ಹಾಕುತ್ತವೆ. ಬಿದಿರು ಕುಲ ಅಳಿಯಿತು. ದಂಶಕ ಪ್ರಾಣಿಕುಲ ಬೆಳೆಯಿತು. ರೈತಕುಲ ಕಷ್ಟನಷ್ಟಗಳಿಗೀಡಾಯಿತು. ಇಷ್ಟೇ ಅಲ್ಲ ಸತ್ತು ಬಿದ್ದ ಇಲಿಗಳು ಅಲ್ಲಲ್ಲೇ ಕೊಳೆತು ನಾರುವುದಕ್ಕೆ ಆರಂಭವಾಯಿತು. ಪ್ಲೇಗು ರೋಗ ಹರಡಿತು. ಜನರನ್ನು ಆಹುತಿ ತೆಗೆದುಕೊಂಡಿತು. ಈ ಸುತ್ತು ಸರಪಣಿ ಬಿದಿರು ಹುಟ್ಟಿಕೊಂಡ ಆದಿ ಕಾಲದಿಂದಲೂ ಅವಿಚ್ಛಿನ್ನವಾಗಿ ಮರಳಿ ಮರಳಿ ಒದಗುತ್ತ ಬಂದಿದೆ. ಸ್ವಾಭಾವಿಕವಾಗಿ ತಲೆದೋರುವ ಕ್ಷಾಮಕ್ಕೆ ಬಿದಿರು ಅಪರೋಕ್ಷವಾದ ಕಾರಣ ನಮ್ಮ ದೇಶದಲ್ಲಿ ಬೆಳೆಯುವ ಬಿದಿರು ಜಾತಿಗಳಲ್ಲಿ ಅನೇಕವು ಸುಮಾರು ಮೂವತ್ತು ವರ್ಷಗಳಿಗೊಮ್ಮೆ ಹೀಗೆ ಹೂತಳೆದು ಅಳಿಯುತ್ತವೆ. ಬೀಜಗಳು ಮೊಳೆತು ಹೊಸ ತಲೆಮಾರು ಹುಟ್ಟುತ್ತದೆ.

ಬಿದಿರು ಬೆಳೆಯುವ ದೇಶಗಳಲ್ಲಿ ಆದಿಕಾಲದಿಂದಲೂ ಜನಜೀವನ ಬಿದಿರಿನೊಂದಿಗೆ ನಂಟುಗೊಂಡು ಬಂದಿದೆ. ಮಗು ಹುಟ್ಟಿದ ಗಳಿಗೆಯಿಂದ ಅದು ಮನುಷ್ಯನಾಗಿ ಬೆಳೆದು ಶತವರ್ಷಕಾಲ ಜೀವಿಸಿ ಅಳಿದ ಗಳಿಗೆಯಲ್ಲಿ ಕೂಡ ಬಿದಿರಿನ ನೆರವು ಸತತವಾಗಿ ಒದಗಿ ಬರುತ್ತದೆ. ಮನೆ ಕಟ್ಟುವುದರಿಂದ ಮೊದಲುಗೊಂಡು ಮೊರ, ಪೊರಕೆಗಳವರೆಗೂ ಬಿದಿರಿನ ಬಳಕೆ ಪ್ರಖ್ಯಾತವಾದದ್ದು.

(127 ಪದಗಳಿದ್ದು, ಅದನ್ನು 30 ರಿಂದ 40 ಸಾಲುಗಳಿಗೆ ಸಂಕ್ಷೇಪಿಸಿ)

IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆಗಳನ್ನು ರೂಪಿಸಿ. **(2×1=2)**

V. ಇವುಗಳಲ್ಲಿ ಎರಡು ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ. **(2×1=2)**

1) ಪಲಾಯನ ಮಾಡು
2) ಸಾಫಲ್ಯ
3) ನಿರ್ವಹಣೆ
4) ರಣರಂಗ.

VI. ಕನ್ನಡದ ಪ್ರಮುಖ ಕಾದಂಬರಿಗಳನ್ನು ಡಿಜಿಟಲ್ ರೂಪದಲ್ಲಿ ಹೊರತರುವಂತೆ ಕೋರಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಪತ್ರ ಬರೆಯಿರಿ. **(1×4=4)**

VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. (1×4=4)

1) ಪಾರುಪತ್ಯ
2) ನಗಣ್ಯ
3) ಕಿರುಗುತ್ತಿ
4) ಹುಂಬತನ
5) ಕವಚ
6) ಚೂಡಾಮಣಿ.

VIII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರುತಿಸಿ ಬರೆಯಿರಿ. (1×5=5)

1) ಭಗವಂತನಿಗೆ ಯಾವುದರ ಮೇಲೆ ಕಣ್ಣು ?
   ಅ) ಭಕ್ತನ ಮೇಲೆ ಆ) ಪೂಜೆಯ ಮೇಲೆ
   ಇ) ದೇವಾಲಯದ ಮೇಲೆ ಈ) ಮೇಲಿನ ಎಲ್ಲವೂ
2) ಇಳವರಸ ಬಿದಿರನ್ನು ಯಾವುದರ ಗುರುತಾಗಿ ಇಟ್ಟುಕೊಳ್ಳುತ್ತೇನೆ ಎಂದು ಹೇಳುತ್ತಾನೆ ?
   ಅ) ಪ್ರವಾಸದ ಗುರುತಾಗಿ ಆ) ಸಹಪಾಟಿಗಳ ಗುರುತಾಗಿ
   ಇ) ಆಗುಂಬೆಯ ಗುರುತಾಗಿ ಈ) ತನ್ನ ಕಾಲೇಜಿನ ಗುರುತಾಗಿ
3) ತೆಂಗಿನ ಮರಗಳನ್ನು ಕವಿ ಯಾವುದಕ್ಕೆ ಹೋಲಿಸಿದ್ದಾರೆ ?
   ಅ) ಮನದಲ್ಲಿ ಚಿಮ್ಮುವ ಆಸೆಗಳಿಗೆ ಆ) ಸದಾಗರಿ ಬಿಚ್ಚಿನಿಂತಿರುವ ಹಕ್ಕಿಗಳಿಗೆ
   ಇ) ಕಲ್ಪವೃಕ್ಷಗಳಿಗೆ ಈ) ನೃತ್ಯಗಾರ್ತಿಗೆ
4) "ಇಷ್ಟು ಒಳ್ಳೆಯ ಆಟಗಾರ್ತಿಯನ್ನು ಬಿಟ್ಟು ಹೋಗಬೇಕಾಯಿತಲ್ಲ" ಎಂದು ಪರಿತಪಿಸಿದ್ದು ಯಾರು ?
   ಅ) ತಂದೆ ಆ) ತಾಯಿ
   ಇ) ಸಹಪಾಠಿಗಳು ಈ) ಉಪಾಧ್ಯಾಯಿನಿ
5) ಇಂಗ್ಲೆಂಡಿನಲ್ಲಿ ಇರುವ ಆಡಳಿತ ವ್ಯವಸ್ಥೆ ಯಾವುದು ?
   ಅ) ಕಾರ್ಮಿಕರ ರಾಜ್ಯ ವ್ಯವಸ್ಥೆ ಆ) ಪ್ರಜಾಪ್ರಭುತ್ವ
   ಇ) ರಾಜತ್ವ ಈ) ಸರ್ವಾಧಿಕಾರಿ ವ್ಯವಸ್ಥೆ

---